ಶಾಂಘೈನಲ್ಲಿ 'ಹೆಲೊ ಕೋರ್ಗಿ' ಎಂಬ ಕೆಫೆ ಶುರುವಾಗಿದೆಯಂತೆ. ಅಲ್ಲಿ ಗ್ರಾಹಕರು ಕಾಫಿ ಹೀರುತ್ತ ನಾಯಿಮರಿಗಳನ್ನು ಮುದ್ದು ಮಾಡಬಹುದಂತೆ. ಮುದ್ದು ಮಾಡುತ್ತ ತಾವೇ ನಾಯಿಮರಿಗಳಂತಾಡುವ ಗ್ರಾಹಕರನ್ನು ಮಾಲೀಕರು ಕುರಿಗಳನ್ನಾಗಿ ಮಾಡಿದ್ದು ಗೊತ್ತಾಗುವುದು ಪರ್ಸ್ ಖಾಲಿ ಆದಾಗಲೇ!



ಇಸ್ರೇಲಿನ ಈ ಐಟನ್ ಬಾರ್‌ಗ ಶೇಕರ್ (ಉಪ್ಪು– ಮೆಣಸು ಚಿಮುಕಿಸುವ ಡಬ್ಬಿ)ಗಳೆಂದರೆ ಪ್ರಾಣವಂತೆ. ಹೋದಲ್ಲೆಲ್ಲ ಈ ಶೇಕರ್‌ಗಳ ಮೇಲೇ ಕಣ್ಣು. ಈ ಬಾರ್ ಭೇಟಿ ಕೊಟ್ಟ ಉಪಾಹಾರಗೃಹಗಳೂ ಸಾಕಷ್ಟು ನಷ್ಟ ಅನುಭವಿಸಿರಬಹುದು.



ಚೀನಾದಲ್ಲಿ ಯುವಕನೊಬ್ಬ ತನ್ನದೇ ಕಾಲುಚೀಲದ ಕೆಟ್ಟ ವಾಸನೆಯಿಂದ ಶ್ವಾಸಕೋಶ ಸೋಂಕಿಗೆ ಒಳಗಾಗಿ ಬಳಲುತ್ತಿದ್ದು, ವಿಶ್ವದಲ್ಲಿ ಇದು ಈ ರೀತಿಯ ಮೊದಲ ಪ್ರಕರಣವಂತೆ. ಆ ಯುವಕನಿಗೆ ಕಿತ್ತು ಬರುವ ಬೆವರಿನ ಸಮಸ್ಯೆ. ಜೊತೆಗೆ ಆಗಾಗ ಬೆವರಲ್ಲಿ ನೆಂದ ಕಾಲುಚೀಲಗಳ ವಾಸನೆ ಹೀರುವ ವಿಚಿತ್ರ ಕಾಯಿಲೆ. ಈ ಎರಡೂ ಸೇರಿ ಮೂರನೇ ಕಾಯಿಲೆಯನ್ನು ಸೃಷ್ಟಿಸಿವೆ. ಹೆಂಡತಿ ವಿಚ್ಛೇದನಕ್ಕೆ ಮೊರೆ ಹೋಗಿದ್ದರಿಂದ ನಾಲ್ಕನೆಯದಾಗಿ ಮಾನಸಿಕ ಕಾಯಿಲೆಯೂ ಸೇರಿಕೊಳ್ಳಬಹುದು.

ಜನರ ಮೊಬೈಲ್ ಹುಚ್ಚು ಬಿಡಿಸಲು ಅಮೆರಿಕದ ಲಘು ಪಾನೀಯದ ಕಂಪನಿಯೊಂದು ಸ್ಪರ್ಧೆ ಏರ್ಪಡಿಸಿದೆಯಂತೆ. ಒಂದು ವರ್ಷ ಸ್ಮಾರ್ಟ್ ಫೋನ್ ಬಳಸದಿದ್ದರೆ ಒಂದು ಲಕ್ಷ ಡಾಲರ್ (ಸುಮಾರು 72 ಲಕ್ಷ ರೂಪಾಯಿ) ಬಹುಮಾನ ಜೇಬಿಗಿಳಿಸಬಹುದು. ಕರೆ ಮಾಡಲು ಕಂಪನಿಯೇ ಬೇಸಿಕ್ ಫೋನ್ ನೀಡುವುದಂತೆ. ಲಘು ಪಾನೀಯ ಕುಡಿಯುವ ಜನರ ಹುಚ್ಚು ಬಿಡಿಸಲು ಸ್ಮಾರ್ಟ್ ಫೋನ್ ಕಂಪನಿಯವರೂ ಸ್ಪರ್ಧೆ ಏರ್ಪಡಿಸಲು ತಯಾರಿ ನಡೆಸಿರಬಹುದು.



ಓದುಗರನ್ನು ಸೆಳೆಯಲು ಬ್ರೆಜಿಲ್‌ನ ರಾಯಲ್ ಪೋರ್ತುಗೀಸ್ ಕ್ಯಾಬಿನೆಟ್ ಆಫ್ ರೀಡಿಂಗ್ ಗ್ರಂಥಾಲಯದಲ್ಲಿ ರೋಚಕ ಸಿನಿಮಾ ಸೆಟ್ ತರಹದ ವಾತಾವರಣ ನಿರ್ಮಿಸಲಾಗಿದೆಯಂತೆ. ಓದಿ ಓದಿ ಎಂದು ಒತ್ತಾಯಿಸಲು ನಡೆಸುತ್ತಿರುವ ತರಹೇವಾರಿ ಕಸರತ್ತಿಗೆ ಇದು ಹೊಸ ಸೇರ್ಪಡೆ.

ಹಾಂಗ್‌ಕಾಂಗ್‌ನಲ್ಲಿ ಕಳೆದ ವಾರ ಕಟ್ಟಡವೊಂದರಿಂದ ಅಕ್ಷರಶಃ ಹಣದ ಮಳೆ ಬಿತ್ತು. ಬಿಟ್ ಕಾಯಿನ್ ವ್ಯವಹಾರ ನಡೆಸುವ ವೋಂಗ್ ಚಿಂಗ್ ಕಿತ್ ಎಂಬಾತ ಕಟ್ಟಡವೇರಿ 18 ಲಕ್ಷ ರೂಪಾಯಿ ಮೌಲ್ಯದ ಹಾಂಗ್‌ಕಾಂಗ್ ಡಾಲರ್‌ಗಳನ್ನು ಕಟ್ಟಡದ ಮೇಲಿಂದ ಎಸೆದನಂತೆ. ಜನ ಕೈಗಳಿಂದ ಹಣ ಕ್ಯಾಚ್ ಹಿಡಿದು ಜೇಬಿಗೆ ಸೇರಿಸಿದರೆ, ಪೊಲೀಸರು ವೋಂಗ್ ಕೈಗೆ ಕೋಳ ಸೇರಿಸಿದರಂತೆ. ಸಿರಿವಂತರನ್ನು ದೋಚಿ ಬಡವರ ಉದ್ಧಾರ ಮಾಡುವ ಆತನ ಕನಸು ಹೀಗೆ ಜೈಲಿನ ಪಾಲಾಗಬಾರದಿತ್ತು.

